**ಕರ್ನಾಟಕ ಸರ್ಕಾರ**

**ಸಮಗ್ರ ಮಕ್ಕಳ ರಕ್ಷಣಾ ಯೋಜನೆ**

ಸಂ.ಕೆಎಸ್‌ಐಸಿಪಿಎಸ್/ಕೋವಿಡ್-19/2020-21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು,ದಿನಾಂಕ:17.04.2020

## ತಿದ್ದುಪಡಿ ಆದೇಶ

*****

ಕೋವಿಡ್-19 ತಡೆಗಟ್ಟುವ ಹಿನ್ನೆಲೆಯಲ್ಲಿ ಭಾರತ ಸರ್ಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ನವದೆಹಲಿ ರವರು ದಿನಾಂಕ:07.04.2020ರಂದು ಝೂಮ್ ಮೂಲಕ ಒಂದು ವೀಡಿಯೋ ಸಭೆಯನ್ನು ನಿರ್ವಹಿಸಿದ್ದು, ಸದರಿ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆ, ಬೆಂಗಳೂರು ನಿರ್ದೇಶಕರಿಂದ ಹೊರಡಿಸಿದ ಪತ್ರ ಸಂ.ಕೆಎಸ್‌ಐಸಿಪಿಎಸ್/ಕೋವಿಡ್-19/2020-21 ದಿನಾಂಕ:07.04.2020ರ ಪತ್ರದ ಅನುಬಂಧದಲ್ಲಿ ನಮೂದಿಸಿರುವ ಝೂಮ್ ಮೂಲಕ ಉಪಸ್ಥಿತಿ ಸಭೆಗಳನ್ನು ನಡೆಸಲು ಸೂಚಿಸಲಾಗಿತ್ತು.

ಆದರೆ ಪ್ರಸ್ತುತವಾಗಿ ಝೂಮ್ ಕುರಿತು ಇತ್ತೀಚೆಗೆ ಹಲವಾರು ತಾಂತ್ರಿಕ ಸಮಸ್ಯೆಗಳು ಮತ್ತು ದೂರುಗಳು ದಾಖಲಾಗುತ್ತಿದ್ದು, ಝೂಮ್ ಆಪ್ ಬಳಸದಂತೆ ಎಚ್ಚರಿಕೆ ನೀಡಲಾಗುತ್ತಿದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆ, ಬೆಂಗಳೂರು ನಿರ್ದೇಶಕರಿಂದ ಹೊರಡಿಸಿದ ಪತ್ರ ಸಂ.ಕೆಎಸ್‌ಐಸಿಪಿಎಸ್/ಕೋವಿಡ್-19/2020-21 ದಿನಾಂಕ:07.04.2020ರ ಪತ್ರದ ಅನುಬಂಧದಲ್ಲಿ ನಮೂದಿಸಿರುವ ಝೂಮ್ ಮೂಲಕ ಉಪಸ್ಥಿತಿ ಸಭೆಗಳನ್ನು ನಡೆಸುವುದು ಎಂಬುದನ್ನು ಈ ತಿದ್ದುಪಡಿ ಆದೇಶದ ಮೂಲಕ ತೆಗೆದುಹಾಕಲಾಗಿದೆ. ಅದರಂತೆ ಈ ತಿದ್ದುಪಡಿ ಆದೇಶವನ್ನು ತಕ್ಷಣದಿಂದ ಜಾರಿಗೊಳಿಸಲು ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಹಾಗೂ ಎಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳಿಗೆ ತಿಳಿಸಿದೆ.

17.04.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

1) ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಮುಖಾಂತರ ಸರ್ಕಾರಿ ಮತ್ತು ಸರ್ಕಾರೇತರ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಿಗೆ.

2) ಎಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳಿಗೆ